# ವಿದಾಯಕ್ಕೆ ಸಕಾಲ?

ಶ್ರೀಲಂಕಾದ ಏಕದಿನ ಕ್ರಿಕೆಟ್ ತಂಡದ ನಾಯಕನಾಗಿದ್ದ ಲಸಿತ್ ಮಾಲಿಂಗ ವಿಶ್ವಕಪ್ ಹೊಸ್ತಿಲಲ್ಲಿ ಕ್ಯಾಪ್ಟನ್ ಹುದ್ದೆಯನ್ನು ಕಳೆದುಕೊಂಡಿದ್ದಾರೆ. ಅಲ್ಲಿನ ಕ್ರಿಕೆಟ್ ಮಂಡಳಿ ಈ ಸಲದ ವಿಶ್ವಕಪ್ ಟೂರ್ನಿಗೆ ತಂಡವನ್ನು ಪ್ರಕಟಿಸಿದ್ದು ಮಾಲಿಂಗನನ್ನು ನಾಯಕತ್ವದಿಂದ ಕೆಳಗಿಳಿಸಿದೆ. ಆದರೆ 15ರ ತಂಡದಲ್ಲಿ ಬೌಲರ್ ಆಗಿ ಉಳಿಸಿಕೊಂಡಿದೆ. ಜನವರಿಯಲ್ಲಿ ಕ್ರಿಕೆಟ್ ತಂಡದ ನಾಯಕತ್ವವನ್ನು ವಹಿಸಿಕೊಂಡ ಮಾಲಿಂಗ, ನಾಲ್ಕೇ ತಿಂಗಳಲ್ಲಿ ಪಟ್ಟದಿಂದ ಕೆಳಗಿಳಿಯುವಂತಾಗಿದೆ. ಈ ನಾಲ್ಕು ತಿಂಗಳಲ್ಲಿ ಲಸಿತ್ ಮಾಲಿಂಗ ಒಟ್ಟು 14 ಪಂದ್ಯಗಳಲ್ಲಿ ನಾಯಕನಾಗಿ ಕಾರ್ಯನಿರ್ವಹಿಸಿದ್ದ. ಅದರಲ್ಲಿ 13 ಪಂದ್ಯಗಳಲ್ಲಿ ತಂಡ ಸೋಲನುಭವಿಸಿದ್ದು, ಒಂದು ಪಂದ್ಯ ಡ್ರಾ ಆಗಿದೆ! ವಿಶ್ವಕಪ್ ಹೊಸ್ತಿಲಲ್ಲಿ ಇಂತಹ ವಿಫಲ ನಾಯಕನನ್ನು ಇಟ್ಟುಕೊಳ್ಳುವುದು ಸರಿಯಲ್ಲ ಎಂದು ಅಲ್ಲಿನ ಕ್ರಿಕೆಟ್ ಮಂಡಳಿಗೆ ಅನ್ನಿಸಿದ್ದರಲ್ಲಿ ತಪ್ಪೇನೂ ಇಲ್ಲ. ಈ ಸುದ್ದಿಯ ಬೆನ್ನಲ್ಲೇ ಮಾಲಿಂಗ ಒಂದುದಿನದ ಕ್ರಿಕೆಟ್‌ನಿಂದಲೇ ನಿವೃತ್ತಿಯಾಗಬಹುದು ಎನ್ನುವ ಸುದ್ದಿ ಹಬ್ಬಿದೆ. ಕ್ರಿಕೆಟ್ ಆಟಗಾರರ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ 'ನಾವು ಮತ್ತೆ ಮೈದಾನದಲ್ಲಿ ಸೇರಲಿಕ್ಕಿಲ್ಲ' ಎಂದು ಸ್ವತಃ ಮಾಲಿಂಗ ಕಳುಹಿಸಿದ ಮೆಸೇಜ್, ನಿವೃತ್ತಿಯ ಸುದ್ದಿಗೆ ಪುಷ್ಟಿ ನೀಡಿದೆ. (ಇದನ್ನು ನೀವು ಓದುವ ಹೊತ್ತಿಗೆ ನಿವೃತ್ತಿಯ ಘೋಷಣೆ ಆದರೂ ಆಶ್ಚರ್ಯವಿಲ್ಲ.)



ಶ್ರೀಲಂಕಾ ಕ್ರಿಕೆಟ್ ತಂಡದಲ್ಲಿ ಎಲ್ಲವೂ ಸರಿಯಿಲ್ಲ ಎಂದಾಗಿ ವರ್ಷಗಳೇ ಉರುಳಿವೆ. ಕೆಲವೇ ವರ್ಷಗಳ ಹಿಂದೆ ಜಗತ್ತಿನ ದೈತ್ಯ ಕ್ರಿಕೆಟಿಗರನ್ನೆಲ್ಲ ನಡುಗಿಸಿದ ತಂಡವದು. ಅರ್ಜುನ ರಣತುಂಗ, ಮೆಂಡಿಸ್, ಜಯಸೂರ್ಯ, ಮಹಾನಾಮ, ಮುರಳಿ, ಚಮಿಂಡಾ ವಾಸ್. ಹಸನ್ ತಿಲಕರತ್ನೆ, ಅರವಿಂದ ಡಿಸಿಲ್ವ– ಹೀಗೆ ಆ ಕಾಲದ ಕ್ರಿಕೆಟಿಗರು ಶ್ರೀಲಂಕಾ ತಂಡವನ್ನು ವಿಶ್ವ ಕ್ರಿಕೆಟ್‌ನ ಉತ್ತುಂಗಕ್ಕೆ ತಂದು ನಿಲ್ಲಿಸಿದರು. 1996ರಿಂದ 2014ರವರೆಗೆ ಶ್ರೀಲಂಕಾದ ಸ್ವರ್ಣಯುಗ. 96ರಲ್ಲಿ ಏಕದಿನ ವಿಶ್ವಕಪ್ ಗೆದ್ದದ್ದು, 2007 ಮತ್ತು 11ರಲ್ಲಿ ವಿಶ್ವಕಪ್ ರನ್ನರ್‌ಅಪ್ ಆದದ್ದು, 2014ರಲ್ಲಿ ಟಿ20 ವಿಶ್ವಕಪ್ ಗೆದ್ದದ್ದು, 2009 ಮತ್ತು 2012ರಲ್ಲಿ ಟಿ20 ವಿಶ್ವಕಪ್ ರನ್ನರ್‌ಅಪ್ ಆದದ್ದು– ಹೀಗೆ ಅದು ಸಾಧನೆಯ ಕಾಲ. ಈಗದು ಗತ ಇತಿಹಾಸ.

ಈ ಸ್ವರ್ಣಯುಗದ ಅವಧಿಯಲ್ಲೇ ತಂಡಕ್ಕೆ ಕಾಲಿಟ್ಟಾತ ಲಸಿತ್ ಮಾಲಿಂಗ. 2004ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಪಂದ್ಯಕ್ಕೆ ಆಯ್ಕೆಯಾದ ಮಾಲಿಂಗ ಕೆಲವೇ ತಿಂಗಳಲ್ಲಿ ಏಕದಿನ ಕ್ರಿಕೆಟ್ ತಂಡಕ್ಕೂ ಆಯ್ಕೆಯಾದ. ಕಳೆದ 18 ವರ್ಷಗಳಲ್ಲಿ ಲಂಕಾ ತಂಡದ ಮಾಂತ್ರಿಕ ಬೌಲರ್ ಆಗಿ ಮೆರೆದದ್ದು ಸಣ್ಣ ಸಾಧನೆಯೇನಲ್ಲ. ಮುತ್ತಯ್ಯ ಮುರಳೀಧರನ್ ಅದಾಗಲೇ ಸ್ಪಿನ್ ಮಾಂತ್ರಿಕನಾಗಿ ಹಲವು ಪಂದ್ಯಗಳನ್ನು ಏಕಾಂಗಿಯಾಗಿ ಗೆದ್ದುಕೊಟ್ಟಿದ್ದು ದಾಖಲಾಗಿತ್ತು. ಮಾಲಿಂಗ ಫಾಸ್ಟ್ ಮೀಡಿಯಂ ಬೌಲರ್ ಆಗಿ ಮಿಂಚಿದ. ವೇಗದ ಬೌಲರ್‌ಗಳ ಪೈಕಿ ಚಮಿಂಡಾ ವಾಸ್, ಲಂಕಾದ ಶ್ರೇಷ್ಠ ಬೌಲರ್ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಸತತ ವಿಕೆಟ್‌ಗಳನ್ನು ಉರುಳಿಸುವುದರಲ್ಲಿ ಮಿಂಚಿದಾತ ಮಾಲಿಂಗ. ಈತ ತಂಡದ ಸ್ಪೆಷಲಿಸ್ಟ್ ಡೆತ್ ಬೌಲರ್. ಗಂಟೆಗೆ 140 ಕಿ.ಮೀ ವೇಗ ಸಾಧಿಸಿದ್ದ ಮಾಲಿಂಗ, ಸ್ಲೋ ಬಾಲ್ ಯಾರ್ಕರ್ ಮತ್ತು ಇನ್‌ಸ್ವಿಂಗ್‌ಗಳಿಗೆ ಹೆಸರುವಾಸಿ. 'ಸ್ಲಿಂಗ್ ಮಾಲಿಂಗ' ಎಂದೇ ಅಡ್ಡ ಹೆಸರು! ಬೇಕೆಂದಾಗ ಆಫ್‌ಸ್ಪಿನ್ನರೂ ಹೌದು. ಆದರೆ ಬೌಲಿಂಗ್ ಆ್ಯಕ್ಷನ್ ವಿವಾದದಿಂದ ಕೀರ್ತಿಗೆ ಕುಂದುಂಟಾದದ್ದೂ ಇದೆ. ಬೌಲಿಂಗ್ ಮಾಡುವಾಗ ಕೈಯನ್ನು ನೇರಕ್ಕೆ ಮೇಲೆತ್ತದೆ ಅಡ್ಡಲಾಗಿ ಬೀಸುತ್ತಾನೆ ಎನ್ನುವುದು ತನಿಖೆಗೂ ಒಳಗಾಗಿ ಕೊನೆಗೆ ಈತನ ಪರವಾಗಿಯೇ ತೀರ್ಪು ಬಂತು.

ಮಾಲಿಂಗ ಹೆಸರಲ್ಲಿರುವ ವಿಶ್ವದಾಖಲೆಗಳನ್ನು ಇನ್ನೊಬ್ಬ ಮುರಿಯುವುದು ಕಷ್ಟವೇ. ಎರಡು ವಿಶ್ವಕಪ್‌ಗಳಲ್ಲಿ ಹ್ಯಾಟ್ರಿಕ್ ವಿಕೆಟ್ ಸಾಧಿಸಿದ ಏಕೈಕ ಬೌಲರ್ ಈತ. ಏಕದಿನ ಪಂದ್ಯಗಳಲ್ಲಿ ಮೂರು ಹ್ಯಾಟ್ರಿಕ್‌ಗಳನ್ನು ಗಳಿಸಿದ ಏಕೈಕ ಬೌಲರ್. ಅಂತರರಾಷ್ಟ್ರೀಯ ಪಂದ್ಯದಲ್ಲಿ ಸತತ ನಾಲ್ಕು ಬಾಲ್‌ಗಳಲ್ಲಿ ವಿಕೆಟ್ ಉರುಳಿಸಿದವನೂ ಈತನೊಬ್ಬನೇ. ಟಿ20 ಪಂದ್ಯಗಳಲ್ಲಿ ಶ್ರೀಲಂಕಾ ಪರವಾಗಿ ಅತ್ಯಧಿಕ ವಿಕೆಟ್ ಪಡೆದಿರುವ ಮಾಲಿಂಗ, ವಿಶ್ವದಲ್ಲೂ ಟಿ20 ಅತ್ಯಧಿಕ (97) ವಿಕೆಟ್‌ಗಳನ್ನು ಪಡೆದವರಲ್ಲಿ ದ್ವಿತೀಯ. (ಶಾಹಿದ್ ಅಫ್ರಿದಿ ಮೊದಲಿಗ.)

ಟೆಸ್ಟ್‌ನಿಂದ ನಿವೃತ್ತಿ ಪಡೆದು 8 ವರ್ಷಗಳೇ ಆಗಿವೆ. ದೇಶದ ಕ್ರಿಕೆಟ್ ಮಂಡಳಿ ಜೊತೆಗೆ ಮಾಲಿಂಗನ ಜಗಳವೂ ಹೊಸತಲ್ಲ. ದೇಶದ ತಂಡಕ್ಕೆ ಆಡುವುದಕ್ಕಿಂತ ಹೆಚ್ಚಾಗಿ ಭಾರತದಲ್ಲಿ ಐಪಿಎಲ್ ಪಂದ್ಯದಲ್ಲಿ ಆಡುವುದನ್ನೇ ಈತ ಇಷ್ಟಪಡುತ್ತಾನೆ ಎನ್ನುವುದು ಆರೋಪ. ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ ತಂಡಕ್ಕೆ ಈತ ದೊಡ್ಡ ಆಸರೆ.

ಬೌಲರ್/ ಬ್ಯಾಟ್ಸ್‌ಮನ್ ಆಗಿ ಸಾಧನೆ ಮಾಡಿದವರು ಕ್ಯಾಪ್ಟನ್ ಆಗಿ ಸಕ್ಸಸ್ ಆಗಬೇಕೆಂದಿಲ್ಲ. ಹಿಂದೆ ಸಚಿನ್ ತೆಂಡೂಲ್ಕರ್ ನಾಯಕತ್ವದ ವಿಷಯದಲ್ಲೂ ಭಾರತ ತಂಡಕ್ಕೆ ಇಂತಹ ಅನುಭವವಾಗಿತ್ತು. ಈಗ ಮಾಲಿಂಗ ನಾಯಕನಾಗಿ ಇಲ್ಲದಿದ್ದರೂ ವೇಗದ ಬೌಲರ್ ಆಗಿ ವಿಶ್ವಕಪ್‌ನಲ್ಲಿ ಆಡಿದರೆ ಸಕ್ಸೆಸ್ ಆಗಬಹುದು. ತಿಂಗಳ ಹಿಂದೆಯೇ 'ವಿಶ್ವಕಪ್ ಬಳಿಕ ಏಕದಿನ ಪಂದ್ಯಗಳಿಂದ ನಿವೃತ್ತಿ ಆಗುತ್ತೇನೆ' ಎಂದಾತ ಹೇಳಿದ್ದುಂಟು. ಆದರೆ ಈಗ ನಾಯಕತ್ವದಿಂದ ಕೆಳಗಿಳಿಸಿದ್ದು ವಿಶ್ವಕಪ್‌ಗೆ ಮುನ್ನವೇ ನಿವೃತ್ತಿಯ ಸುದ್ದಿಗೆ ಇಂಬು ನೀಡಿದೆ.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65